

ಇನ್‌ಗ್ರಿಡ್ ಯಾಂಕರ್

ಪ್ರಬುದ್ಧ ಕವಿತೆಗಳನ್ನು ಬರೆದಿದ್ದಳು. ಶಾಲೆಯ ಪತ್ರಿಕೆಗಳಲ್ಲಿ ಅವಳ ಹಲವು ಕವಿತೆಗಳು ಪ್ರಕಟಗೊಂಡವು. ಅಂದಿನ ಪ್ರಮುಖ ಕವಿ ಡಿ.ಜೆ. ಒಪ್ಪರ್‌ಮನ್ ಮತ್ತು ಇತರ ಸಾಹಿತಿಗಳ ಜೊತೆ ಅವಳು ಸಾಹಿತ್ಯ ಸಂವಾದಗಳನ್ನು ನಡೆಸುತ್ತಿದ್ದಳು. ದಕ್ಷಿಣ ಆಫ್ರಿಕಾ ಸಾಹಿತ್ಯ ಕ್ಷೇತ್ರದಲ್ಲಿ ಈ ಹೊತ್ತಿನವರೆಗೂ ಗಟ್ಟಿಯಾಗಿ ನೆಲೆಯೂರಿರುವ ಇನ್‌ಗ್ರಿಡ್‌ಳ ಮೊದಲ ಕವನಸಂಕಲನ 'ಎಸ್ಕೇಪ್'(ಪಲಾಯನ) ಪ್ರಕಟವಾದದ್ದು 1956ರಲ್ಲಿ. ಸಂಕಲನವನ್ನು ಇನ್‌ಗ್ರಿಡ್ ತಂದೆಗೆ ಅರ್ಪಿಸಿದ್ದಳು. ತನ್ನ ಆ ಪುಟ್ಟ ಕನಸಿನ ಕೂಸನ್ನು ಕೊಂಡೊಯ್ದು ತಂದೆಯ ಕೈಯಲ್ಲಿಟ್ಟಾಗ ಅವನು ಮೊದಲ ಪುಟವನ್ನಷ್ಟೇ ನೋಡಿ, 'ಮಗೂ, ಈ ಪುಸ್ತಕದಲ್ಲಿ ಮುಖಪುಟವಲ್ಲದೆ ಬೇರೇನಾದರೂ ಹುರುಳು ಇದೆ ಅಂತ ನನಗನ್ನಿಸುವುದಿಲ್ಲ. ಆದರೂ ನೀನು ನನಗೆ ಹೇಗೆ ಅವಮಾನ ಮಾಡಿದ್ದೀಯ ಅಂತ ತಿಳಿಯಲು ಇದನ್ನು ಓದುತ್ತೇನೆ' ಎನ್ನುತ್ತಾನೆ. ಮಹಾಸ್ವಾಭಿಮಾನಿ ಇನ್‌ಗ್ರಿಡ್ ತುಂಬಿದ ಕಣ್ಣೀರನ್ನು ತುಳುಕಿಸದೆ ಅಲ್ಲಿಂದ ಹಿಂತಿರುಗುತ್ತಾಳೆ. ಸಂಕಲನದ ಶೀರ್ಷಿಕೆ ಕವನ ಇದು:

## ಪಲಾಯನ

ಓಡಿಹೋಗಿದ್ದೇನೆ ಮನಸ್ಸಿನಲ್ಲಿ ವಾಲ್ಕೆನ್‌ಬರ್ಗಿನ ಸೆಲ್ಲಿಂದ
ಮರಳಿ ಬಂದಿದ್ದೇನೆ ಗೋರ್ಡನ್ ಬೀಚಿಗೆ ಬಾಲ್ಯದ ನೆನಪಿನ ಉಕ್ಕಂದ

ಹಾಯಾಗಿ ಈಜುತ್ತಿದ್ದೇನೆ ಗೊಜಮೊಟ್ಟೆಗಳ ಜೊತೆಯಲ್ಲಿ
ಕೆತ್ತುತ್ತೇನೆ ಸ್ವಸ್ತಿಕದ ಗುರುತು ಕೆಂಪುಮರದ ತೊಗಟೆಯಲ್ಲಿ

ಕಡಲ ದಂಡೆಯಿಂದ ದಂಡೆಗೆ ಪಿರಿಪಿರಿ ತಿರುಗುತ್ತ
ಸಂಜೆಗಾಳಿಗೆ ಮುಖವೊಡ್ಡಿ ಬೊಗಳುವ ನಾಯಿ ನಾನು

ಹಸಿದು ಹಾರುತ್ತ ಬೇಟೆ ಮೇಲೆರಗುವ ಕಡಲಹಕ್ಕಿ ನಾನು
ಸತ್ತ ರಾತ್ರಿಗಳ ಊಟವನು ಬಡಿಸಬಂದವಳು ನಾನು

ಓ ಕಡಲೇ, ಗಾಳಿಮಂಜಿಂದ ನಿನಗಾಕಾರವಿತ್ತು
ನನ್ನ ನೋವನ್ನು ನಿನ್ನೊಳಗೆ ಕರಗಿಸಿ ತಣಿಸಲೆಳಸಿದ್ದಾನೆ ದೇವರು:

ನನ್ನ ದೇಹ ಬಿದ್ದಿದೆ ಹೆಣವಾಗಿ ಹುಲ್ಲುಜೊಂಡಿನಲ್ಲಿ
ಕಡಲು ಮರಳಿ ಎಸೆದಿದೆ ಅದನ್ನು
ಹಿಂದೊಮ್ಮೆ ನಾವು ಅಲೆದಾಡಿದ ಈ ಎಲ್ಲ ಜಾಗದಲ್ಲಿ.